**B**

**CCE RR**
**UNREVISED**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 24. 06. 2019 ] ಸಂಕೇತ ಸಂಖ್ಯೆ : **83-K (Phy.)**

Date : 24. 06. 2019 ] CODE No. : **83-K (Phy.)**

## ವಿಷಯ : ವಿಜ್ಞಾನ

## Subject : SCIENCE

**( ಭೌತಶಾಸ್ತ್ರ / Physics )**

**( ಕನ್ನಡ ಭಾಷಾಂತರ / Kannada Version )**

**( ಹಳೆ ಪಠ್ಯಕ್ರಮ / Old Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 1. | ಮರವನ್ನು ಹದಗೊಳಿಸಲು ಮತ್ತು ಸಮುದ್ರದ ನೀರನ್ನು ನಿರ್ಲವಣೀಕರಣಗೊಳಿಸಲು ಬಳಸುವ ಸೌರಸಾಧನ<br>(A) ಸೌರಕೋಶ (B) ಸೌರ ಸಂಗ್ರಾಹಕ<br>(C) ಸೌರ ಹೀಟರ್ (D) ಸೌರ ದೀಪ<br>***ಉತ್ತರ :*** (C) — ಸೌರ ಹೀಟರ್ | 1 |
| 4. | ಸೋನಾರ್‌ನಲ್ಲಿ ಶ್ರವಣಾತೀತ ತರಂಗಗಳನ್ನು ವಿದ್ಯುತ್ ಸಂಜ್ಞೆಗಳಾಗಿ ಪರಿವರ್ತಿಸುವ ಭಾಗ<br>(A) ಪತ್ತೆಕಾರಿ (B) ಪ್ರೇಷಕ<br>(C) ಪರಿವರ್ತಕ (D) ವಿಶ್ಲೇಷಕ<br>***ಉತ್ತರ :*** (A) — ಪತ್ತೆಕಾರಿ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ಪರಸ್ಪರ ಪ್ರೇರಣೆಯ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಾಧನ<br>(A) ಮೋಟಾರ್ (B) ಡೈನಮೋ<br>(C) ಟ್ರಾನ್ಸಿಸ್ಟರ್ (D) ವಿದ್ಯುತ್ ಪರಿವರ್ತಕ<br>***ಉತ್ತರ :*** (D) — ವಿದ್ಯುತ್ ಪರಿವರ್ತಕ | 1 |
| 14. | ಗಾಳಿ ಶಕ್ತಿಗಿಂತ ಅಲೆಗಳ ಶಕ್ತಿಯು ಹೆಚ್ಚು ನಂಬಲರ್ಹವಾಗಿದೆ. ಏಕೆ ?<br>***ಉತ್ತರ :***<br>ಪರಿಮಿತಗಳು ಕಡಿಮೆ | 1 |
| 17. | ಡೈನಮೋದಲ್ಲಿ ಜಾರು ಉಂಗುರಗಳನ್ನು ಸೀಳು ಉಂಗುರಗಳಿಂದ ಬದಲಾಯಿಸಿದಾಗ ಉಂಟಾಗುವ ವಿದ್ಯುತ್ತಿನ ವಿಧವನ್ನು ಹೆಸರಿಸಿ.<br>***ಉತ್ತರ :***<br>ನೇರ ವಿದ್ಯುತ್ (ಡಿ.ಸಿ.) | 1 |
| 19. | ಅಡ್ಡ ತರಂಗ ಮತ್ತು ನೀಳ ತರಂಗಗಳ ನಡುವಣ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.<br>***ಉತ್ತರ :*** | |

| ***ಅಡ್ಡ ತರಂಗಗಳು*** | ***ನೀಳ ತರಂಗಗಳು*** |
|---|---|
| i) ಅಡ್ಡ ತರಂಗಗಳಲ್ಲಿ ಮಾದ್ಯಮದ ಕಣಗಳು ತರಂಗದ ಚಲನೆಯ ದಿಕ್ಕಿಗೆ ಲಂಬವಾಗಿ ಕಂಪಿಸುತ್ತವೆ. | i) ನೀಳ ತರಂಗಗಳಲ್ಲಿ ಮಾಧ್ಯಮದ ಕಣಗಳು ತರಂಗದ ಚಲನೆಯ ದಿಕ್ಕಿನಲ್ಲಿ (ಸಮನಾಂತರ) ಕಂಪಿಸುತ್ತವೆ |
| ii) ಅಡ್ಡ ತರಂಗಗಳಲ್ಲಿ ಉಬ್ಬು ಮತ್ತು ತಗ್ಗುಗಳು ಉಂಟಾಗುತ್ತವೆ. | ii) ನೀಳ ತಂರಂಗಗಳಲ್ಲಿ ಸಂಪೀಡನ ಮತ್ತು ವಿರಳನಗಳು ಉಂಟಾಗುತ್ತವೆ. |
| iii) ಪರ್ಯಾಯವಾಗಿ ಉಂಟಾಗುವ ಉಬ್ಬು ಮತ್ತು ತಗ್ಗು ತರಂಗವನ್ನು ಪ್ರತಿನಿಧಿಸುತ್ತದೆ. | iii) ಪರ್ಯಾಯವಾಗಿ ಉಂಟಾಗುವ ಸಂಪೀಡನ ಮತ್ತು ವಿರಳನ ಅಲೆಯನ್ನು ಪ್ರತಿನಿಧಿಸುತ್ತದೆ. |

(ಯಾವುದಾದರೂ ಎರಡು) 1 + 1 — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಪೆಟ್ರೋಲ್ ಇಂಜಿನ್‌ನ ಕಾರ್ಯವಿಧಾನದಲ್ಲಿ ಭುಕ್ತಿ ಹೊಡೆತವನ್ನು ವಿವರಿಸಿ.<br>***ಉತ್ತರ :***<br>ಭುಕ್ತಿ ಹೊಡೆತ :<br>(i) ಆಗಮ ಕವಾಟ ತೆರೆದು ಮತ್ತು ನಿರ್ಗಮನ ಕವಾಟ ಮುಚ್ಚಿರುತ್ತದೆ.<br>(ii) ಪಿಸ್ಟನ್ ಸಿಲಿಂಡರ್‌ನಲ್ಲಿ ಕೆಳಗೆ ತಳ್ಳಲ್ಪಡುತ್ತದೆ.<br>(iii) ಇಂಧನ ಮಿಶ್ರಣ (ಪೆಟ್ರೋಲ್ + ಗಾಳಿ) ಆಗಮ ಕವಾಟದಿಂದ ಸಿಲಿಂಡರಿಗೆ ಹರಿಯುತ್ತದೆ.<br>(ಯಾವುದಾದರೂ ಎರಡು) 1 + 1 | 2 |
| 25. | ಒಂದು ಉಷ್ಣ ಇಂಜಿನ್‌ನ ದಕ್ಷತೆಯು 30 ಇದೆ. 60,000 ಜೌಲ್‌ಗಳಷ್ಟು ಉಷ್ಣವನ್ನು ಇಂಜಿನ್‌ಗೆ ಒದಗಿಸಿದರೆ ಆ ಇಂಜಿನ್ ಮಾಡಿದ ಕೆಲಸವನ್ನು ಕಂಡುಹಿಡಿಯಿರಿ.<br>***ಉತ್ತರ :***<br>$\eta = \frac{W}{H} \times 100$ ; $\eta = 30$ ½<br>$30 = \frac{W}{60\cancel{000}} \times 1\cancel{00}$ ; $H = 60{,}000$, $W = ?$ ½<br>$30 \times 600 = W$ ½<br>18000 ಜೌಲ್‌ಗಳು = ಮಾಡಿದ ಕೆಲಸ ½ | 2 |
| 28. | ಒಂದು ಹಡಗು ಶ್ರವಣಾತೀತ ಧ್ವನಿಯನ್ನು ಪ್ರೇಷಿಸುತ್ತದೆ. ಈ ಧ್ವನಿಯು ಸಮುದ್ರದ ತಳದಿಂದ ಪ್ರತಿಫಲಿಸಿ 6 ಸೆಕೆಂಡ್‌ಗಳ ನಂತರ ಹಿಂದಿರುಗುತ್ತದ. ನೀರಿನಲ್ಲಿ ಶ್ರವಣಾತೀತ ಧ್ವನಿಯ ಜವ $1 \cdot 5$ kms$^{-1}$ ಆಗಿದ್ದಲ್ಲಿ ಸಮುದ್ರದ ಆಳವನ್ನು ಕಂಡುಹಿಡಿಯಿರಿ.<br>***ಉತ್ತರ :***<br>ದೂರ = 2 × ಸಮುದ್ರದ ಆಳ<br>$V = \frac{2d}{t}$ ; $V = 1 \cdot 5$ kms$^{-1}$<br>$d = \frac{Vt}{2}$ ; $t$ = 6 ಸೆಕೆಂಡುಗಳು ½<br>$d = \frac{1 \cdot 5 \times 6}{2}$ ½<br>$d = 1 \cdot 5 \times 3 = 4 \cdot 5$ km ½<br>ಸಮುದ್ರದ ಆಳ = $4 \cdot 5$ km ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

31. D.C. ಮೋಟಾರ್‌ನ ಚಿತ್ರವನ್ನು ಬರೆದು, ಕೆಳಗಿನ ಭಾಗಗಳನ್ನು ಗುರುತಿಸಿ :

(i) ಕುಂಚಗಳು

(ii) ಆರ್ಮೇಚರ್‌ನಲ್ಲಿನ ಸುರುಳಿ

*ಉತ್ತರ :*




*ಭಾಗಗಳು :*

*ABCD* → ಆರ್ಮೇಚರ್‌ನಲ್ಲಿನ ಸುರುಳಿ ಚಿತ್ರಕ್ಕೆ 1

$B_1$, $B_2$ → ಕುಂಚಗಳು ಭಾಗಗಳಿಗೆ ½ + ½ 2

35. ನ್ಯೂಕ್ಲೀಯ ವಿದ್ಯುತ್ ಕ್ರಿಯಾಕಾರಿಯ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :

(a) ವಿಕಿರಣ ಕವಚ

(b) ತಂಪುಕಾರಕ

*ಉತ್ತರ :*

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|




ಚಿತ್ರಕ್ಕೆ 2

ಭಾಗಗಳಿಗೆ ½ + ½ — 3

38. (a) *p*-ವಿಧದ ಮತ್ತು *n*-ವಿಧದ ಅರೆವಾಹಕಗಳ ನಡುವಣ ಎರಡು ವ್ಯತ್ಯಾಸಗಳನ್ನು ಬರೆಯಿರಿ.

(b) ಡೈಯೋಡ್‌ನ ಯಾವುದಾದರೂ ಎರಡು ಅನ್ವಯಗಳನ್ನು ಬರೆಯಿರಿ.

***ಅಥವಾ***

(a) ಶುದ್ಧ ಅರೆವಾಹಕಗಳು ಮತ್ತು ಅಶುದ್ಧ ಅರೆವಾಹಕಗಳ ನಡುವಣ ಎರಡು ವ್ಯತ್ಯಾಸಗಳನ್ನು ಬರೆಯಿರಿ.

(b) ಅತಿವಾಹಕಗಳ ಯಾವುದಾದರೂ ಎರಡು ಅನ್ವಯಗಳನ್ನು ಬರೆಯಿರಿ.

***ಉತ್ತರ :***

| (a) *n*-ರೀತಿಯ ಅರೆವಾಹಕ | *p*- ರೀತಿಯ ಅರೆವಾಹಕ |
|---|---|
| ★ As, Sb ಯಂತಹ ಪಂಚ ವೆಲೆನ್ಸಿ ಪರಮಾಣುಗಳನ್ನು ಸೇರಿಸಿದಾಗ ಉಂಟಾಗುತ್ತದೆ. | ★ Ga, In, AC ನಂತಹ ತ್ರಿವೇಲೆನ್ಸಿ ಪರಮಾಣುಗಳನ್ನು ಸೇರಿಸಿದಾಗ ಉಂಟಾಗುತ್ತದೆ. 1 |
| ★ ಹೆಚ್ಚಿನ ಸಂಖ್ಯೆಯ ಇಲೆಕ್ಟ್ರಾನುಗಳು ಹಾಗೂ ಕಡಿಮೆ ಸಂಖ್ಯೆಯ ರಂಧ್ರಗಳಿಂದ ವಾಹಕತೆ ಉಂಟಾಗುತ್ತದೆ. | ★ ತಾಪಮಾನದಿಂದ ಹೆಚ್ಚಿನ ಸಂಖ್ಯೆಯಿ ರಂಧ್ರಗಳು ಹಾಗೂ ಕಡಿಮೆ ಸಂಖ್ಯೆಯ ಇಲೆಕ್ಟ್ರಾನುಗಳಿಂದ ವಾಹಕತೆ ಉಂಟಾಗುತ್ತದೆ. 1 |

(b) (i) ಪರ್ಯಾಯ ವಿದ್ಯುತ್‌ನ್ನು ( AC ) ನೇರ ವಿದ್ಯುತ್ತನ್ನಾಗಿ ( DC ) ಪರಿವರ್ತಿಸುವಲಿ

(ii) ವೋಲ್ಟೇಜ್ ಕ್ರಮಗೊಳಿಸುವ ವ್ಯವಸ್ಥೆಯಲ್ಲಿ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | (iii) ಗಣಕ ಯಂತ್ರಗಳ ಲಾಜಿಕ್ ಮಂಡಲಗಳಲ್ಲಿ<br>(ಯಾವುದಾದರೂ ಎರಡು) ½ + ½ | 3 |
| | ***ಅಥವಾ*** | |

| (a) ***ಶುದ್ಧ ಅರೆವಾಹಕಗಳು*** | ***ಅಶುದ್ಧ ಅರೆವಾಹಕಗಳು*** |
|---|---|
| ★ ಇವು ಸಿಲಿಕಾನ್ ಮತ್ತು ಜರ್ಮೇನಿಯಮ್ ಧಾತುಗಳ ಪರಿಶುದ್ಧ ಹರಳುಗಳಿಂದುಂಟಾಗುತ್ತವೆ | ★ ಇವು ಶುದ್ಧ ಅರೆವಾಹಕಗಳಿಗೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇತರೆ ಧಾತುಗಳ ಬೆರಕೆ ಮಾಡುವುದರಿಂದುಂಟಾಗುತ್ತದೆ. 1 |
| ★ ಇಲೆಕ್ಟ್ರಾನುಗಳ ಸಂಖ್ಯೆ ಹಾಗೂ ರಂಧ್ರಗಳ ಸಂಖ್ಯೆ ಪರಸ್ಪರ ಸಮನಾಗಿರುತ್ತವೆ ( $n_e = n_h$ ) | ★ ಇಲೆಕ್ಟ್ರಾನುಗಳ ಸಂಖ್ಯೆ ಹಾಗೂ ರಂಧ್ರಗಳ ಸಂಖ್ಯೆ ಪರಸ್ಪರ ಸಮನಾಗಿರುವುದಿಲ್ಲ ( $n_e \neq n_h$ ) 1 |

| | | |
|---|---|---|
| | (b) (i) ಶಕ್ತಿಯುತ ವಿದ್ಯುತ್‌ಕಾಂತಗಳಲ್ಲಿ ಬಳಸಲಾಗುತ್ತವೆ.<br>(ii) ಹೆಚ್ಚಿನ ತಾಪದ ಅತಿವಾಹಕಗಳನ್ನು ಮೈಕ್ರೋವೇವ್ ಉಪಕರಣಗಳಲ್ಲಿ ಬಳಸುತ್ತಾರೆ.<br>(iii) ಅತಿವಾಹಕ ( MRI ) ಕಾಂತಗಳನ್ನು ಕಾಂತೀಯ ಅನುರಣನ ಬಿಂಬದಲ್ಲಿ ಉಪಯೋಗಿಸುತ್ತಾರೆ.<br>(ಯಾವುದಾದರೂ ಎರಡು) ½ + ½ | 3 |
| 40. | (a) ನಾಕ್ಷತ್ರಿಕ ವಿಕಾಸದಲ್ಲಿರುವ ಹಂತಗಳನ್ನು ಹೆಸರಿಸಿ, ಪ್ರಾಥಮಿಕ ಹಂತವನ್ನು ವಿವರಿಸಿ.<br>(b) ನಕ್ಷತ್ರಗಳು ವಿಭಿನ್ನ ಬಣ್ಣಗಳಲ್ಲಿ ಕಾಣಲು ಕಾರಣವೇನು ?<br>***ಅಥವಾ***<br>(a) ಮಹಾಸ್ಫೋಟ ಸಿದ್ಧಾಂತವನ್ನು ವಿವರಿಸಿ.<br>(b) ಕಕ್ಷಾವೇಗ ಮತ್ತು ವಿಮೋಚನಾ ವೇಗದ ನಡುವಣ ಸಂಬಂಧವನ್ನು ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* | |
| | (a) (i) ಆದಿ ನಕ್ಷತ್ರ | |
| | (ii) ಸ್ಥಿರ ಸ್ಥಿತಿ | |
| | (iii) ಕೆಂಪು ದೈತ್ಯ | |
| | (iv) ಶ್ವೇತ ಕುಬ್ಜ | |
| | (v) ಸೂಪರ್ನೋವಾ | |
| | (vi) ಕಪ್ಪು ಕುಳಿ $4 \times \frac{1}{2} = 2$ | |
| | ಆದಿನಕ್ಷತ್ರ *:* ಅನಿಲ ಕಣಗಳ ನಡುವಿನ ಪರಸ್ಪರ ಆಕರ್ಷಣೆಯು ಅನಿಲದ ಗೋಲವನ್ನು ಸಂಕುಚಿತಗೊಳ್ಳುವಂತೆ ಮಾಡುತ್ತದೆ. ಇದರಿಂದ ತಾಪ ಮತ್ತು ಒತ್ತಡ ಹೆಚ್ಚುತ್ತಾ ಹೈಡ್ರೋಜನ್ ಸಮ್ಮಿಲನದಿಂದ ಗೋಳದ ಕೇಂದ್ರದಲ್ಲಿ ದ್ರವ್ಯವನ್ನು ಉಂಟುಮಾಡುತ್ತದೆ. 1 | |
| | (b) ಆಂತರಿಕ ತಾಪ / ಬೆಳಕಿನ ವಕ್ರೀಭವನ 1 | 4 |
| | ***ಅಥವಾ*** | |
| | (a) ಸೂಪರ್‌ನೋವಾ ಸ್ಫೋಟ ನಿದರ್ಶನದ ಆಧಾರದ ಮೇಲೆ ಮತ್ತು ನಕ್ಷತ್ರಗಳ ಉಗಮದ ಆಧಾರದ ಮೇಲೆ ವಿಶ್ವಕ್ಕೆ ಸಂಬಂಧಿಸಿದಂತೆ ಸ್ಫೋಟದ ಬಗ್ಗೆ ವಿವರಿಸಲಾಗಿದೆ. 2 | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | ವಿಶ್ವದ ಆರಂಭದಲ್ಲಿ ಗೆಲಕ್ಸಿ, ನಕ್ಷತ್ರಗಳಲ್ಲಿರುವ ಸಮಸ್ತ ದ್ರವ್ಯ ಮತ್ತು ವಿಕಿರಣಗಳು ಬೆಂಕಿಯುಂಡೆಯೋಪಾದಿಯಲ್ಲಿ ಸಂಪೀಡನಗೊಂಡಿದ್ದು, ಅದನ್ನು ಪರಮಾದಿ ಅಗ್ನಿಗೋಲ ಎನ್ನುತ್ತಾರೆ.<br>ಈ ಬೆಂಕಿಯುಂಡೆ ಭಾರಿ ಭೀಷಣವಾಗಿ ಸ್ಫೋಟಿಸಿ, ಈ ಸ್ಫೋಟದಿಂದ ಅದರಲ್ಲಿರುವ ಪದಾರ್ಥ ಅತ್ಯಧಿಕ ವೇಗದಿಂದ ಹೊರಕ್ಕೆಸೆಯಲ್ಪಟ್ಟಿತು. ಹೀಗೆ ವಿಶ್ವದ ಉಗಮವಾಯಿತು. ಇದಕ್ಕೆ ಆಧಾರವೆಂದರೆ ಗೆಲಕ್ಸಿಗಳಿಂದ ಬರುವ ಬೆಳಕಿನ ಕೆಂಪು ಪಲ್ಲಟ. | 1 | |
| | (b) $V_e = \sqrt{2}\ V_o$ | 1 | 4 |